ಹೇಳಿದಂತೆ ಸರ್ಕಾರ ಮಾಡಿದಂಥ ೫೬ ಲಕ್ಷ ರೂಪಾಯಿ ಎಸ್ಟಿಮೇಟನ್ನು ಅಲ್ಲಿನ ಮುನಿಸಿಪಾಲಿಟಿ ಯವರು ಒಪ್ಪಲಿಲ್ಲ. ಒಟ್ಟಿನಲ್ಲಿ ಅಲ್ಲಿ ಕುಡಿಯುವ ನೀರಿನ ತೊಂದರೆಗೆ ಶಾಶ್ವತವಾದ ಪರಿಹಾರ ವನ್ನು ಮಾಡುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಲಿಂಗಯ್ಯ.—ಕೊಳವೆ ಭಾವಿಯಿಂದ ನೀರನ್ನು ಒದಗಿಸುವುದು ಬಹಳ ಕಷ್ಟದ ಕೆಲಸ ಎಂದು ಎಲ್ಲರಿಗೂ ಮನವರಿಕೆಯಾಗಿದೆ. ಮುನಿಸಿಪಾಲಿಟಿಯವರು ಹಣವನ್ನು ಒದಗಿಸುವುದಕ್ಕಾಗು ವುದಿಲ್ಲ ಎಂದು ಅರ್ಥ ಬರುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ೧೯೭೧ನೇ ಸೆನ್ಸಸ್ ಪ್ರಕಾರ ೨೦ ಸಾವಿರ ಜನಸಂಖ್ಯೆ ಇರುವ ಜಾಗಗಳನ್ನು ಸರ್ಕಾರ, ಗ್ರಾಮಾಂತರ ನೀರು ಸರ ಬರಾಜು ಯೋಜನೆಯೊಳಗೆ ಒಳಪಡಿಸಿ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಅವಕಾಶ ಇದೆ. ಆ ದೃಷ್ಟಿ ಯಿಂದ ಗಾಯಿತ್ರಿ ಜಲಾಶಯದಿಂದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡು ತ್ತೇನೆ.

ಶ್ರೀ ಧರ್ಮಸಿಂಗ್.—ಇವರು ಕೊಟ್ಟಿರುವ ಸಲಹೆಯ ಬಗೆ ಗಮನಹರಿಸಿ ಸೂಕ್ತವಾದ ಕ್ರಮ ವನ್ನು ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ.

Chief Sugar-Cane Development Officer at Mahadeswara Co-operative Sugar Mills.

386. SRI G. RAJU GOWDA (Hanur).—Will the Minister for Co-operation be pleased to state.—

(a) whether it is not a fact that an officer from the Agricultural University has been appointed as Chief Sugar Cane Development Officer at Mahadeswara Co-operative Sugar Factory ;

(b) the grounds on which his services were barrowed ;

(c) the reasons for sending him back ;

(d) who is looking after his duties at present ?

SRI A. B. JAKANUR (Minister for Co-operation).—

(a) Yes.

(b) On deputation basis.

(c) The factory authorities have not executed any type of agreement in obtaining his services for 5 years and the Chief Sugar Cane Development Officer has also not executed any agreement to the effect that he would serve for five years. Taking all these points into consideration he is sent back to Agricultural University as he is having a lien on a permanent post in the Agricultural University.

(d) Sri Ramakrishna, Cane Development Officer is discharging the duties of the Chief Sugar Cane Development Officer.

ಶ್ರೀ ಜಿ. ರಾಜುಗೌಡ.— ಸ್ವಾಮಿ, ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲೇ ಕಬ್ಬು ಅಭಿವೃದ್ಧಿ ಅಧಿಕಾರಿ ಇದ್ದರೂ ಕೂಡ ಕೃಷಿ ವಿಶ್ವವಿದ್ಯಾನಿಲಯದಿಂದ ಬೇರೊಬ್ಬರನ್ನು ಕರೆಸಿಕೊಂಡು ಅವರ ಸೇವೆಯನ್ನು ಎರವಲು ಪಡೆಯುವುದಕ್ಕೆ ಕಾರಣವೇನು?

ಶ್ರೀ ಎ. ಬಿ. ಜಕನೂರ್ .—ಎರಪಲು ಸೇವೆಯನ್ನು ಅವರು ಬೇಡಿದ್ದರು, ಆ ಪ್ರಕಾರ ಕೊಟ್ಟಿದ್ದೆವು.

ಶ್ರೀ ಜಿ. ರಾಜೂಗೌಡ. —ನಿಮ್ಮಲ್ಲೇ ಇದ್ದಮೇಲೆ ಬೇರೆ ಕಡೆಯಿಂದ ಏತಕ್ಕೆ ಕರೆಸಿಕೊಂಡಿರಿ?

ಶ್ರೀ ಎ. ಬಿ. ಜಕನೂರ್. —ಅಲ್ಲಿದ್ದವರು ಕಬ್ಬು ಅಭಿವೃದ್ಧಿ ಅಧಿಕಾರಿ. ಆದರೆ ಅವರಿಗೆ ಕಬ್ಬು ಅಭಿವೃದ್ಧಿ ಮುಖ್ಯಾಧಿಕಾರಿ ಬೇಕಾಗಿತ್ತು. ಬೇಕು ಎಂದಾಗ ಕೊಟ್ಟಿದ್ದೇವೆ, ಬೇಡ ಎಂದಾಗ ಬೇರೆ ಕಡೆಗೆ ಕಳಿಸಿದ್ದೇವೆ.

ಶ್ರೀ ಜಿ. ರಾಜುಗೌಡ.—ಬೇಡ ಎಂದಾಗ ಹೋಗುವುದಕ್ಕೆ ತಯಾರಾಗಿ ಅವರು ಬಂದರೇ ಅಥವಾ ನಿಮ್ಮ ಕಾರ್ಖಾನೆಯ ನಿಬಂಧನೆ ಪ್ರಕಾರ ಬಂದರೇ?

ಶ್ರೀ ಎ. ಬಿ. ಜಕನೂರ್.—ನಿಯಮದ ಪ್ರಕಾರ ಕಾರ್ಖಾನೆಗೆ ೫ ವರ್ಷ ಬಾಂಡ್ ಬರೆದುಕೊಡ ಬೇಕಾಗಿತ್ತು. ಆದರೆ ಬರೆದು ಕೊಡಲಿಲ್ಲ. ನಮಗೆ ಬೇಡ ಎಂದು ಕಾರ್ಖಾನೆಯವರು ಹೇಳಿದರು. ಆದ್ದರಿಂದ ವಾಪಸ್ ಕಳುಹಿಸಿದ್ದೇವೆ.

ಶ್ರೀ ಜಿ. ರಾಜುಗೌಡ.—೫ ವರ್ಷ ಸೇವೆ ಸಲ್ಲಿಸುತ್ತೇನೆ ಎಂದು ಕರಾರು ಬರೆದು ಕೊಡುವುದಕ್ಕೆ ಅವರು ಒಪ್ಪಲಿಲ್ಲವೋ? ಅಥವಾ ತಾವು ಒಪ್ಪಲಿಲ್ಲವೋ?

ಶ್ರೀ ಎ. ಬಿ. ಜಕನೂರ್.—ಇದರಲ್ಲಿ ನಾವು ಒಪ್ಪುವ ಪ್ರಶ್ನೆ ಇಲ್ಲ, ಇದು ಕಾರ್ಖಾನೆ ಮತ್ತು ಅಧಿಕಾರಿಗೆ ಸಂಬಂಧಪಟ್ಟದ್ದು ಇಬ್ಬರೂ ಒಪ್ಪಲಿಲ್ಲ. ಆದ್ದರಿಂದ ವಾಪಸ್ ಕಳುಹಿಸಿದ್ದೇವೆ.

ಶ್ರೀ ಜಿ. ರಾಜುಗೌಡ.—ಆಗಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೂ ಕಬ್ಬು ಅಭಿವೃದ್ಧಿ ಅಧಿಕಾರಿಗೂ ವೈಮನಸ್ಸು ಉಂಟಾದ ಕಾರಣ ಸೇವೆಯನ್ನು ತಿರಸ್ಕಾರ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎ. ಬಿ. ಜಕನೂರ್.—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

Held over Questions

Cases against traders for non payment of cess to the Hosadurga Market.

1. SRI K. VENKATARAMAIAH (Hosadurga).—Will the Minister for Finance and Co-operation be pleased to state.—

(a) the number of Merchants who were transporting articles in lorries without paying cess to the Hosadurga market and were caught. The number of cases filed against such merchants in the last year.

(b) the reasons for dismissal of cases ;

(c) who are the Merchants who have not paid the market cess since the year 1968 and what action the Government has taken s far against them?

SRI M. VEERAPPA MOILY (Minister for Finance and Co-operation).—

(a) No merchant has transported controlled articles without paying market tax and no case of any kind was filed against any Merchant.